







ಕಳೆದ ಒಂದೆರಡು ವಾರಗಳಿಂದ ಈ ರೇಡಿಯೊ ಕಾಲರ್ ಆ್ಯಕ್ಟಿವೇಟ್ ಆಗಿದ್ದು, ಈ ಕಾಡಾನೆಗಳ ಚಲನವಲನಗಳನ್ನು ಅಧಿಕಾರಿಗಳು ವೀಕ್ಷಿಸುತ್ತಿದ್ದಾರೆ. ಈ ಆನೆಗಳ ಇರುವಿಕೆಯನ್ನು ಕಂಡುಹಿಡಿದು ರೈತರಿಗೆ ಸೂಕ್ತ ಮುನ್ಸೂಚನೆ ಕೊಡುವ ಹಾಗೂ ಸಿಬ್ಬಂದಿಯ ಮೂಲಕ ಈ ಆನೆಗಳ ಚಲನವಲನಗಳನ್ನು ನಿಯಂತ್ರಿಸುವ ಆಲೋಚನೆ ಅರಣ್ಯ ಅಧಿಕಾರಿಗಳದ್ದು.

ಆನೆಗಳಿಗೆ ರೇಡಿಯೊ ಕಾಲರ್ ಅಳವಡಿಸುವ ಮೊದಲ ಪ್ರಯತ್ನ ಸಾಕಷ್ಟು ಸಾಹಸದ್ದೇ ಆಗಿತ್ತು. ಅವತ್ತು ಮಧ್ಯಾಹ್ನ ಎರಡು ಗಂಟೆಯ ಹೊತ್ತಿಗೆ ಮಡಿಕೇರಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಮಂಜುನಾಥ್ ಹಾಗೂ ಸೋಮವಾರಪೇಟೆ ಉಪವಲಯದ ಸಹಾಯಕ ಅರಣ್ಯ ಸಂರಕ್ಷಾಧಿಕಾರಿ ಎಂ.ಎಸ್.ಚಿಣ್ಣಪ್ಪ ನೇತೃತ್ವದಲ್ಲಿ ಈ ಕಾರ್ಯಾಚರಣೆ ನಡೆಯಿತು. ಹುಣಸೂರು ವನ್ಯಜೀವಿ ವಿಭಾಗದ ನುರಿತ ವೈದ್ಯಾಧಿಕಾರಿ ಡಾ.ಮುಜಿಬ್ ಕಾರ್ಯಾಚರಣೆಗೆ ಮಾರ್ಗದರ್ಶನ ನೀಡಿದರು.

ಮೊದೂರು ಕಾಫಿ ತೋಟದಲ್ಲಿ ಕಾಣಿಸಿಕೊಂಡ ಗುಂಪಿನಲ್ಲಿದ್ದ ಆನೆಗಳ ಕಡೆಗೆ ನುರಿತ ಸಾಕಾಣೆಗಳ ಜತೆಗೆ ಅಧಿಕಾರಿಗಳು, ಸಿಬ್ಬಂದಿ ಮತ್ತು ಕಾವಾಡಿಗಳ ತಂಡ ನುಗ್ಗಿತು. ಗಾಬರಿಗೊಂಡ ಕಾಡಾನೆಗಳು ತೋಟದಿಂದ ಓಡಲಾರಂಭಿಸಿದವು. ಮೊದಲೇ ಸಿದ್ಧತೆ ಮಾಡಿಕೊಂಡಿದ್ದ ಅರಣ್ಯ ಸಿಬ್ಬಂದಿ ಸಾಕಾನೆಯ ಮೇಲಿಂದ ಅರವಳಿಕೆ ಮದ್ದು ಇದ್ದ ಗುಂಡು ಹಾರಿಸಿದರು. ಸುಮಾರು 25 ವರ್ಷ ವಯಸ್ಸಿನ ಒಂದು ಹೆಣ್ಣಾನೆಗೆ ಈ ಅರವಳಿಕೆ ಚುಚ್ಚುಮದ್ದು ತಾಗಿ, ಅದು ಅಲ್ಲೇ ನಿಂತಿತು. ನಿಂತಿದ್ದ ಹೆಣ್ಣಾನೆಯನ್ನು ಸಾಕಾನೆಗಳಾದ ಭೀಮ ಮತ್ತು ಅಭಿಮನ್ಯು ನೆರವಿನಿಂದ ಸಿಬ್ಬಂದಿಯವರು ನಿಯಂತ್ರಿಸಿದರು. ಅದರ ಕೊರಳಿಗೆ ರೇಡಿಯೊ ಕಾಲರ್ ಅಳವಡಿಸಲಾಯಿತು. ಬಳಿಕ ಡಾ.ಮುಜಿಬ್ ಆ್ಯಂಟಿಡೋಟ್ ನೀಡಿದರು. ಮಂಪರು ಹರಿದ ಬಳಿಕ ಎಚ್ಚರವಾದ ಆ ಹೆಣ್ಣಾನೆ ಒಂದೆ ಸಮನೆ ನುಗ್ಗಿದಾಗ ಸಿಬ್ಬಂದಿ ತಪ್ಪಿಸಿಕೊಂಡು ಓಡಿದರು.

ವಿರಾಜಪೇಟೆ ವಲಯದಲ್ಲಿ ಆನೆಗಳಿಗೆ ರೇಡಿಯೊ ಕಾಲರ್ ಅಳವಡಿಸುವ ಬಗ್ಗೆ ಮೂರು ತಿಂಗಳ ಹಿಂದೆಯೇ ಅಧಿಕಾರಿಗಳು ಚರ್ಚೆ ನಡೆಸಿದ್ದರು. ಹಾಗೆ ಮೊದಲ ಆನೆಯ ಮೇಲಿನ ಪ್ರಯೋಗ ಯಶಸ್ವಿಯಾದ ಬಳಿಕ ನಾಲ್ಕು ರೇಡಿಯೊ ಕಾಲರ್‌ಗಳನ್ನು ತರಿಸಲಾಯಿತು. ತಿತಿಮತಿ, ಬಿಬಿಟಿಸಿ, ಚೆಟ್ಟಳ್ಳಿ ಸಮೀಪದ ಮೀನುಕೊಲ್ಲಿ ಸೇರಿ ಪ್ರದೇಶಗಳಲ್ಲಿ ತಿರುಗಾಡುತ್ತಿರುವ ಒಟ್ಟು ನಾಲ್ಕು ಕಾಡಾನೆಯ ತಂಡಗಳಲ್ಲಿ ಇರುವ ಹೆಣ್ಣಾನೆಗಳನ್ನು ಗುರುತಿಸಲಾಯಿತು. ಈಗ ಒಟ್ಟು ನಾಲ್ಕು ಹೆಣ್ಣಾನೆಗಳಿಗೆ ರೇಡಿಯೊ ಕಾಲರ್ ಅಳವಡಿಸಲಾಗಿದೆ.

ಸಾಮಾನ್ಯವಾಗಿ ಗುಂಪಿನಲ್ಲಿರುವ ಆನೆಗಳನ್ನು ಹೆಣ್ಣಾನೆಗಳು ನಿಯಂತ್ರಿಸುತ್ತವೆ. ಅವುಗಳ ಚಲನವಲನಗಳು ಗೊತ್ತಾದರೆ ಗುಂಪಿನ ಉಳಿದ ಆನೆಗಳನ್ನೂ ಗಮನಿಸುವುದು ಸುಲಭ. ಅದಕ್ಕೆಂದೇ ಹೆಣ್ಣಾನೆಗಳಿಗೇ ರೇಡಿಯೊ ಕಾಲರ್ ಅವಳವಡಿಸಲಾಗಿದೆ.

ಅಂಡ್ರಾಯ್ಡ್ ಫೋನ್‌ಗಳ ಜಿಯೋ ಟ್ರ್ಯಾಕರ್ ಆ್ಯಪ್‌ಗಳನ್ನು ಲೋಡ್ ಮಾಡಿಕೊಂಡು ಆ್ಯಕ್ಟಿವೇಟ್ ಮಾಡಿ ಆನೆಗಳಿಗೆ ಅಳವಡಿಸಿರುವ ಈ ರೇಡಿಯೊ ಕಾಲರ್‌ಗಳಿಗೆ ಜಿಪಿಎಸ್ ಪಾಸ್‌ವರ್ಡ್‌ಗಳನ್ನು ಹಾಕಿ ಇವುಗಳ ಚಲನವಲನಗಳ ಮೇಲೆ ಕಣ್ಣಿಡಲಾಗಿದೆ. ಈಗ ಈ ಆನೆಗಳ ಗುಂಪು ಯಾವ ಪ್ರದೇಶದಲ್ಲಿ ವಸತಿ ಹೂಡಿವೆ, ಯಾವ ದಿಕ್ಕಿನತ್ತ ಚಲಿಸುತ್ತಿವೆ ಎನ್ನುವುದನ್ನು ಕಚೇರಿಯಲ್ಲೇ ಕುಳಿತು ಅರಣ್ಯ ಅಧಿಕಾರಿಗಳು ವೀಕ್ಷಿಸುವುದು ಸುಲಭವಾಗಿದೆ.

ವಿದೇಶಗಳಲ್ಲಿ ಮತ್ತು ಭಾರತದ ಕೆಲವು ರಾಜ್ಯಗಳಲ್ಲೂ ಈ ರೀತಿ ಕಾಡಾನೆಗಳಿಗೆ ರೇಡಿಯೊ ಕಾಲರ್ ಅಳವಡಿಸಲಾಗಿದೆ. ‘ನಮ್ಮ ಪ್ರಯೋಗ ಆರಂಭದಲ್ಲೇ ಯಶಸ್ಸು ಕಂಡಿದೆ. ಮ್ಯಾಪ್‌ನಲ್ಲಿ ಈ ನಾಲ್ಕೂ ಕಾಡಾನೆಗಳ ಸ್ಥಳದ ಹೆಸರು ಮತ್ತು ಚಲಿಸುತ್ತಿರುವ ದಿಕ್ಕನ್ನು ಬೇಕಾದಾಗ ಗಮನಿಸುತ್ತಿದ್ದೇವೆ’ ಎನ್ನುತ್ತಾರೆ ಕಾರ್ಯಾಚರಣೆಯ ಮೇಲ್ವಿಚಾರಕ ವಿರಾಜಪೇಟೆ ವಲಯದ ಡಿಎಫ್‌ಒ ಮರಿಯ ಕ್ರಿಸ್ತರಾಜು. ಅರಣ್ಯ ಸಿಬ್ಬಂದಿ ಮತ್ತು ಡಾ.ಮುಜಿಬ್ ಈ ಆ್ಯಪ್ ಅನ್ನು ಬಳಸುತ್ತಿದ್ದಾರೆ. ಅರಣ್ಯಾಧಿಕಾರಿಗಳ ಸೂಚನೆಯ ಮೂಲಕ ಈಗ ಕಾರ್ಯಾಚರಣೆ ಸುಲಭವಾಗಿದೆ ಎನ್ನುತ್ತಾರೆ ಉಪವಲಯ ಅರಣ್ಯಾಧಿಕಾರಿ ಕನ್ನಂಡ ರಂಜನ್ ಮತ್ತು ಉಪ ಅರಣ್ಯಾಧಿಕಾರಿ ಕಳ್ಳಿರ ದೇವಯ್ಯ.

ಮುಂದಿನ ದಿನಗಳಲ್ಲಿ ಇನ್ನಷ್ಟು ಕಾಡಾನೆಗಳಿಗೆ ರೇಡಿಯೊ ಕಾಲರ್ ಅಳವಡಿಸುವ ಆಲೋಚನೆ ಇದೆ ಎನ್ನುತ್ತಿದ್ದಾರೆ ಅಧಿಕಾರಿಗಳು. ಮೊಬೈಲ್ ಆ್ಯಪ್ ಮತ್ತು ಪಾಸ್‌ವರ್ಡ್‌ಗಳನ್ನು ರೈತರಿಗೂ ನೀಡಿ ಆನೆಗಳ ಚಲನವಲನಗಳನ್ನು ಅವರೂ ಅರಿಯುವಂತೆ ಮಾಡುವ ಆಲೋಚನೆಯೂ ಇದೆ ಎನ್ನುತ್ತಾರೆ ಡಿಎಫ್‌ಒ ಮರಿಯ ಕ್ರಿಸ್ತರಾಜು.